# ಶ್ರೀಗುರುಸಾರ್ವಭೌಮ

ಸಾಂಸ್ಕೃತಿಕ ಕನ್ನಡ ಮಾಸಪತ್ರಿಕೆ

**ಗುರುರಾದ್ಯಃ ಸ್ವಸಿದ್ಧಾಂತಪ್ರತಿಷ್ಠಾಪನಪಂಡಿತಮ್ । ಶ್ರುತ್ವಾಯಂ ವ್ಯಾಸನಿಕಟೇ ನಿಶ್ಚಿಂತ ಇವ ವರ್ತತೇ ॥**

**ಸಂಪುಟ : 34 ಶ್ರಾವಣ – August-September 2007 ಸಂಚಿಕೆ : 06**



ಸಂಸ್ಥಾಪನಾ ಪೋಷಕರು : **ಪ್ರಾತಃಸ್ಮರಣೀಯ ಶ್ರೀಸುಜಯೀಂದ್ರತೀರ್ಥಶ್ರೀಪಾದಂಗಳವರು**

ಸಾಮ್ರಾಟ್ ಪೋಷಕರು : **ಶ್ರೀಸುಶಮೀಂದ್ರತೀರ್ಥಶ್ರೀಪಾದಂಗಳವರು**
ಪೀಠಾಧೀಶ್ವರರು, ಜಗದ್ಗುರು ಶ್ರೀಮನ್ಮಧ್ವಾಚಾರ್ಯ ಮೂಲಮಹಾಸಂಸ್ಥಾನ
ಶ್ರೀರಾಘವೇಂದ್ರಸ್ವಾಮಿಗಳವರ ಮಠ, ಮಂತ್ರಾಲಯ

ಹಾಗೂ

**ಶ್ರೀಸುಯತೀಂದ್ರತೀರ್ಥಶ್ರೀಪಾದಂಗಳವರು**
ಉತ್ತರಾಧಿಕಾರಿಗಳು, ಜಗದ್ಗುರು ಶ್ರೀಮನ್ಮಧ್ವಾಚಾರ್ಯ ಮೂಲಮಹಾಸಂಸ್ಥಾನ
ಶ್ರೀರಾಘವೇಂದ್ರಸ್ವಾಮಿಗಳವರ ಮಠ, ಮಂತ್ರಾಲಯ

ಪ್ರಧಾನ ಸಂಪಾದಕರು : **ರಾಜಾ. ಎಸ್. ರಾಜಗೋಪಾಲಾಚಾರ್ಯ**
ಶ್ರೀಪಾದಂಗಳವರ ಆಪ್ತ ಕಾರ್ಯದರ್ಶಿಗಳು
ಶ್ರೀರಾಘವೇಂದ್ರಸ್ವಾಮಿಗಳವರ ಮಠ, ಮಂತ್ರಾಲಯ

ಕಾರ್ಯನಿರ್ವಾಹಕ ಸಂಪಾದಕರು : **ರಾಜಾ. ಎಲ್. ಸೂರೀಂದ್ರಾಚಾರ್ಯ**

ಸಂಪಾದಕರು : **ಕಡಪ ರಾಘವೇಂದ್ರಾಚಾರ್ಯ**

ಉಪ-ಸಂಪಾದಕರು : **ಪಿ.ವಿ. ಹರಿನಾಥ್**

ಸಂಪಾದಕ ಮಂಡಳಿ : **ವಿದ್ವಾನ್ ಶ್ರೀ ಕುರುಡಿ. ಸುಶೀಲೇಂದ್ರಾಚಾರ್ಯ**
**ಡಾ. ಹೆಚ್.ಜಿ. ವೇಂಕಟರಾಘವೇಂದ್ರಾಚಾರ್ಯ**
**ವಿದ್ವಾನ್ ಶ್ರೀ ಪುರಾಣಿಕ. ಸುಬ್ರಹ್ಮಣ್ಯಾಚಾರ್ಯ**
**ಶ್ರೀ ಬಿ.ಎ. ಪಾಟೀಲ್**



ಪ್ರಧಾನ ಕಛೇರಿ :

**ಶ್ರೀಗುರುಸಾರ್ವಭೌಮ ಮಾಸಪತ್ರಿಕೆ**
ಅಡ್ಮಿನಿಸ್ಟ್ರೇಟಿವ್ ಆಫೀಸ್, ಶ್ರೀರಾಘವೇಂದ್ರಸ್ವಾಮಿಗಳವರ ಮಠ
ಮಂತ್ರಾಲಯ – 518 345, ಜಿಲ್ಲಾ : ಕರ್ನೂಲ್
**ದೂರವಾಣಿ ಸಂಖ್ಯೆ – 08512-279887 — ಮೊಬೈಲ್ – 099857-03033**

ಬೆಂಗಳೂರು ಶಾಖಾ ಕಛೇರಿ :

**ಶ್ರೀಗುರುಸಾರ್ವಭೌಮ ಮಾಸಪತ್ರಿಕೆ**
ಶ್ರೀರಾಘವೇಂದ್ರಸ್ವಾಮಿಗಳವರ ಮಠ, ನಂ. 4, ಸೀತಾಪತಿ ಅಗ್ರಹಾರ
ಹೊಸ ತರಗುಪೇಟೆ, ಬೆಂಗಳೂರು – 560 002
**ಬೆಂಗಳೂರು ಕಛೇರಿಯ ದೂರವಾಣಿ ಸಂಖ್ಯೆ :**
**080-41146081, 9341387714, 9342651516**


## ವಿಷಯಸೂಚೀ


ಮಂಗಳಾಚರಣೆ ೦೩

ಸಂಪಾದಕೀಯ ೦೪

**ಲೇಖನಮಾಲಾ**

ಶ್ರೀಗುರುಸಾರ್ವಭೌಮರ ಭಕ್ತವಾತ್ಸಲ್ಯ! ದಿ. ರಾಜಾ. ಎಸ್. ಗುರುರಾಜಾಚಾರ್ಯರು ೦೫

೩೩೬ ನೇ ಆರಾಧನಾ ಮಹೋತ್ಸವದ ವಿಶೇಷ ಚಿತ್ರಗಳು ೧೧

ಶ್ರೀರಾಯರ ಯಾಜ್ಞೀಯೋಪನಿಷತ್ ಖಂಡಾರ್ಥದ ವೈಶಿಷ್ಟ್ಯ ಮಾಧವಾಚಾರ್ಯ ೨೫

ಮಂತ್ರಾಲಯದಲ್ಲಿ ಸಡಗರ - ಸಂಭ್ರಮ - ವೈಭವ
೩೩೬ ನೇ ಆರಾಧನಾ ಮಹೋತ್ಸವದ ವರದಿ ೩೧


**[ ಪತ್ರಿಕೆಯಲ್ಲಿ ಪ್ರಕಟವಾದ ವಿಚಾರಗಳಿಗೆ ಆಯಾ ಲೇಖನದ ಲೇಖಕರೇ ಜವಾಬ್ದಾರರು ]**

## ಶ್ರೀಗುರುಸಾರ್ವಭೌಮಕ್ಕೆ SMS

ಪ್ರಿಯ ಓದುಗರೇ,

ಅಂಚೆವೆಚ್ಚ ಅಧಿಕವಾಗಿರುವ ಈ ದಿನಗಳಲ್ಲಿ ಓದುಗರ ಮತ್ತು ಪತ್ರಿಕೆಯ ನಡುವಿನ ಸಂಬಂಧವನ್ನು ಅಭಿವೃದ್ಧಿಪಡಿಸುವುದಕ್ಕೋಸ್ಕರ ಇನ್ನು ಮುಂದೆ ನಿಮ್ಮ ಶ್ರೀಗುರುಸಾರ್ವಭೌಮಕ್ಕೆ ನಿಮ್ಮ ಅಭಿಪ್ರಾಯಗಳನ್ನು ಎಸ್.ಎಂ.ಎಸ್. ಮೂಲಕವಾಗಿ ತಿಳಿಸಬಹುದಾಗಿದೆ. ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳು, ಸುದ್ದಿಗಳು ಹಾಗೂ ಇನ್ನಿತರೇ ವಿಷಯಗಳು ನಿಮಗೆ ಇಷ್ಟವಾದಲ್ಲಿ, ಇಷ್ಟವಾಗದಿದ್ದಲ್ಲಿ ನೀವು ನೇರ ಎಸ್.ಎಂ.ಎಸ್. ಮೂಲಕ ನಮ್ಮನ್ನು ಅಭಿನಂದಿಸಬಹುದು, ನಮಗೆ ಸಲಹೆಯನ್ನೂ ನೀಡಬಹುದು. ಆಯ್ದ ಎಸ್.ಎಂ.ಎಸ್.ಗಳನ್ನು ಪತ್ರಿಕೆಯಲ್ಲಿ ಪ್ರಕಟಿಸುವ ಯೋಜನೆಯನ್ನೂ ಕೂಡ ಸಂಪಾದಕಮಂಡಲಿ ಹೊಂದಿದೆ. ಎಸ್.ಎಂ.ಎಸ್.ಗಳನ್ನು ಕಳುಹಿಸುವಾಗ ಎಲ್.ಎಂ. ನಂಬರನ್ನು ತಪ್ಪದೇ ನಮೂದಿಸಿ.

**ಈ ಸಂಖ್ಯೆಗೆ ಎಸ್.ಎಂ.ಎಸ್. ಮಾಡಿ**

**9341387714**

## ಮಂಗಳಾಚರಣೆ

ಸಮಸ್ತಗುಣಪೂರ್ಣಾಯ ದೋಷದೂರಾಯ ವಿಷ್ಣವೇ ।
ನಮಃ ಶ್ರೀಪ್ರಾಣನಾಥಾಯ ಭಕ್ತಾಭೀಷ್ಟಪ್ರದಾಯಿನೇ ।।

**– ಶ್ರೀರಾಘವೇಂದ್ರತೀರ್ಥರು**

ಕಲೌ ಯುಗೇ ಕಲ್ಪತರುಪ್ರಭಾವಉದ್ಧಾರಕರ್ತಾ ಕಲಿತಾಗಸೋಪಿ ।
ಜೀಯಾಚ್ಚಿರಂ ವಿಷ್ಣುಪರಾಗ್ರಗಣ್ಯಃ ಶ್ರೀರಾಘವೇಂದ್ರೋ ಗುರುರಾಡುದಾರಃ ।।

**– ಶ್ರೀಕೃಷ್ಣಾವಧೂತರು**

ಯದ್ಬೃಂದಾವನಸೇವನಂ ವಿತನುತೇ ರಾಶಿ ಶ್ರಿಯಾಮಕ್ಷಯಂ
ವಿದ್ಯಾಸನ್ಮತಿಮಾತನೋತಿ ಪರಮಂ ತನ್ಮೂರ್ತಿಸಂದರ್ಶನಮ್ ।
ತದ್ಬೃಂದಾವನಸೇವನಂ ಕುರು ಸಖೇ ಸದ್ಯೋಽನವದ್ಯಸ್ಸುಧೀಃ
ಪ್ರಜ್ಞಾಯಾಂ ಪ್ರತಿಭಾತಿ ವಿಶ್ವಮಖಿಲಂ ಬಿಂಬಾಪರೋಕ್ಷಂ ಸದಾ ।।

**– ಶ್ರೀಗುರುಜಗನ್ನಾಥದಾಸರು**

ವಂದೇ ಶ್ರೀಗುರುರಾಜಮುಗ್ರತಪಸಂ ಸರ್ವಾರಿದರ್ಪಾಪಹಂ
ದೇವೇಂದ್ರಾಭಸಮೃದ್ಧಸಂಪದಮಮುಂ ಭಕ್ತಪ್ರಿಯಂ ಸದ್ಗುರುಮ್ ।
ಭಕ್ತತ್ರಾಣನಬದ್ಧಕಂಕಣಮಸದ್ಬಾಧಾಹರಂ ಸ್ವರ್ಗವೀ-
ಸ್ವಾರತ್ನಸ್ವರಗಾತ್ಯುದಾರಹೃದಯಂ ತಂ ರಿಷ್ಟತಾತಿಂ ಪ್ರಭುಮ್ ।।

**– ಶ್ರೀಕೃಷ್ಣಾವಧೂತರು**

## ಶ್ರೀಸುಶಮೀಂದ್ರವಾಣಿ

**ರಾಮನು ಅರಣ್ಯಕ್ಕೆ ಹೋದನು. ಬಲಿಯು ಪಾತಾಳಕ್ಕೆ ತುಳಿಯಲ್ಪಟ್ಟನು. ಪಾಂಡವರು ಅರಣ್ಯದಲ್ಲಿ ಕಾಲ ಕಳೆಯ-ಬೇಕಾಯಿತು. ಯಾದವರು ಪರಸ್ಪರ ಹೊಡೆದಾಡಿ ಸತ್ತರು. ನಳನು ರಾಜ್ಯವನ್ನು ಕಳೆದುಕೊಂಡನು. ಲಂಕಾಧಿಪತಿಯಾದ ರಾವಣನು ಸೆರೆಮನೆಗಟ್ಟಲ್ಪಟ್ಟನು. ಕೊನೆಗೆ ಸತ್ತೂಹೋದನು. ಇದೆಲ್ಲವನ್ನೂ ಗಂಭೀರವಾಗಿ ಯೋಚಿಸಿದರೆ ಎಂತಹ ಘಟಾನುಘಟಿಗಳೂ ಅಶಾಶ್ವತರೇ. ಆದರೆ ಅವರು ಸಂಪಾದಿಸಿದ ಕರ್ಮಗಳಿಗನುಸಾರವಾದ ಖ್ಯಾತಿ ಮಾತ್ರ ಶಾಶ್ವತ. ರಾಮನೂ ಪ್ರಸಿದ್ಧನೇ, ರಾವಣನೂ ಪ್ರಸಿದ್ಧನೇ. ಆದರೆ ಪ್ರಸಿದ್ಧರಾದ ವಿಧಾನ ಬೇರೆ. ಶ್ರೀರಾಮನು ಯಾರೆಂದು ಪ್ರಶ್ನಿಸಿ ನಾಶನಾದ ರಾಕ್ಷಸನ (ರಾವಣ) (ಅಪ)ಖ್ಯಾತಿ-ಗಿಂತಲೂ ಜನ್ಮತಳೆದುದಕ್ಕೆ 'ಆದರ್ಶ ವ್ಯಕ್ತಿ' ಎಂದು ಗುರುತಿಸಿಕೊಂಡ ರಾಮನಂತಹವರ ಸತ್ಕೀರ್ತಿ ಶಾಶ್ವತ. ಒಟ್ಟಾರೆ ವ್ಯಕ್ತಿಗಳು ಅಶಾಶ್ವತ. ಗಳಿಸಿದ ಕೀರ್ತಿ ಶಾಶ್ವತ.**





## ಸಂಪಾದಕೀಯ

ವಿಶ್ವದ ಈ ಶತಮಾನದ ಅದ್ಭುತ ಆವಿಷ್ಕಾರ ಯಾವುದು ಎಂದರೆ ಟಿವಿ, ಮೊಬೈಲ್, ಇತ್ಯಾದಿಗಳನ್ನು ಹೇಳಬಹುದು. ಆದರೆ, ಲಕ್ಷಾಂತರ ವರ್ಷದಲ್ಲಿ ನಮ್ಮ ಭಾರತ ದೇಶವು ತನ್ನ ಅದ್ಭುತ ಆವಿಷ್ಕಾರವಾಗಿ ಈ ವಿಶ್ವಕ್ಕೆ ನೀಡಿದ ಕೊಡುಗೆಯೆಂದರೆ **"ಗುರುಪರಂಪರೆ"** ಎಂದು ಹೇಳಬಹುದು.

ದಿಕ್ಕು ತೋಚದೆ ಹುಚ್ಚಾಗಿ ಓಡುವ ಈ ವಿಶ್ವಕ್ಕೆ ಮಾರ್ಗದರ್ಶನವನ್ನು ಮಾಡಿಸಿದವರೇ ಗುರುಗಳು. ಅನೇಕ ವಿಧವಾದ ಪಾಶುಪತ, ವಜ್ರಾಯುಧಾದಿ ಅಸ್ತ್ರಗಳಿಂದ ಶಕ್ತಿಸಂಪನ್ನರಾದ ದೇವಾನು-ದೇವತೆಗಳು ಸಹ ಗುರುಗಳ ಮಾರ್ಗದರ್ಶನದಲ್ಲಿ ಮುಂದುವರೆದವರೇ. ಆದ್ದರಿಂದ ಬೃಹಸ್ಪತ್ಯಾಚಾರ್ಯರು ದೇವಗುರುಗಳಾದರು. ದೇವತೆಗಳು ಹೆದರುತ್ತಿದ್ದುದು ಸಹ ಗುರುಶಾಪಕ್ಕೆ ಮಾತ್ರ. ದುಷ್ಟರು - ಕ್ರೂರರೆಂದು ಕುಖ್ಯಾತರಾದ ರಾಕ್ಷಸರು ಲೋಕಕಂಟಕರಾಗಿ ಮೆರೆದರೂ ಅಂತಹವರೂ ಸಹ ಗುರುಗಳಿಂದ ಮಂತ್ರೋಪದೇಶ ಪಡೆದು ಮಹರುದ್ರದೇವರನ್ನು ಪ್ರತ್ಯಕ್ಷೀಕರಿಸಿಕೊಂಡವರೇ. ನಾರಾಯಣನ ನಾಮಸ್ಮರಣೆ ಮಾಡುತ್ತಾರೆಂಬ ಅಸಮಾಧಾನವಿದ್ದರೂ, ರಕ್ಕಸರು ಅವರ ಬಳಿ ಬರುತ್ತಿದ್ದ ನಾರದ ಮಹರ್ಷಿಗಳನ್ನು ಸಗೌರವದಿಂದ ಕಾಣುತ್ತಿದ್ದರು. ಕಾರಣ, ಅವರು ಗುರುಗಳು. ಹೀಗೆ ದಾನವರೂ ಸಹ ಗುರುಗಳ ಮಾರ್ಗದರ್ಶನದಲ್ಲಿ ಮುನ್ನಡೆದು ಶುಕ್ರಾಚಾರ್ಯರನ್ನು ಗುರುಗಳನ್ನಾಗಿ ಸ್ವೀಕರಿಸಿದರು.

ದೇವತೆಗಳನ್ನು ಬಿಡಿ, ಈ ಮಾನವ - ದಾನವರಲ್ಲಿ ಯಾರು ಶ್ರೇಷ್ಠ ? ದಾನವರು ಇಂದು ಇಲ್ಲ (ಅವರು ತಮ್ಮ ಗುರುಭಕ್ತಿ ಪ್ರದರ್ಶಿಸಿ ಸ್ವಯಂಕೃತಾಪರಾಧದಿಂದ ಮರೆಯಾದರು). ಮಾನವನು ಶ್ರೇಷ್ಠನೆಂದಂಬೋಣವೆಂದರೆ ಸ್ವಾರ್ಥಕ್ಕೆ ಬಿದ್ದು **ಅಜ್ಞಾನವೆಂಬ ಕಪ್ಪು ಕನ್ನಡಕ ಧರಿಸಿ** ಪ್ರಪಂಚವನ್ನೆಲ್ಲಾ ಕಪ್ಪೆಂದು ಭಾವಿಸಿ ದೇವರ ಅಸ್ಥಿತ್ವವನ್ನು ಪ್ರಶ್ನಿಸುತ್ತಾ (ರಾಮನ ಬಗ್ಗೆ ಪ್ರಶ್ನಿಸಲಿಲ್ಲವೇ?) ತಾನೊಬ್ಬ **ಬುದ್ಧಿ**(ಇರುವ? ಇಲ್ಲದ?)**ಜೀವಿ** ಎಂದು ತನ್ನನ್ನೇ ಹೊಗಳಿಕೊಂಡು ಬಾಹ್ಯಪ್ರಪಂಚದ ಅಭಿವೃದ್ಧಿಯನ್ನೇ ದೊಡ್ಡ ಸಾಧನೆ ಎಂದು ಹೇಳಿಕೊಂಡು ಗುರುಗಳ ಮಾರ್ಗದರ್ಶನವಿಲ್ಲದೆ ಆಂತರ್ಯದಲ್ಲಿ ಕೊಳಕು ತುಂಬಿಕೊಂಡಿರುವ ಇವನ ಜೀವನಶೈಲಿಯೆಲ್ಲವೂ ನಾಟಕ, ನಾಟಕ, ನಾಟಕಮಯ. ಹೀಗೆ ಇಂದಿನ ಮಾನವನಲ್ಲಿ ರಾಕ್ಷಸರಲ್ಲಿನ ಗುರುಭಕ್ತಿಯ ನಿಷ್ಠೆಯು ಇಲ್ಲದಿರುವುದರಿಂದ ಇವನು ಯಾವ ರೀತಿಯಲ್ಲಿ ರಾಕ್ಷಸರಿಗಿಂತ ಶ್ರೇಷ್ಠನಾಗಬಲ್ಲ ? ಹೀಗೆ ಮಾನವನ ಕಲ್ಯಾಣಗುಣಗಳನ್ನು ಕಂಡು ಪುರಂದರದಾಸರು ''ಮಾನವ ಜನ್ಮ ದೊಡ್ಡದು ಇದ ಹಾನಿಮಾಡಲುಬೇಡಿ ಹುಚ್ಚಪ್ಪಗಳಿರಾ'' ಎಂದು ಹೇಳುತ್ತಾ ''ಹುಚ್ಚಪ್ಪಗಳು'' ಎಂಬ ಬಿರುದನ್ನು ನೀಡಿದ್ದಾರೆ. ಈಗಲಾದರೂ ನಮ್ಮಲ್ಲಿನ ಹುಚ್ಚು ಬಿಡಬೇಕಿದ್ದರೆ, ದೇವತೆಗಳು ಬೃಹಸ್ಪತ್ಯಾಚಾರ್ಯರನ್ನು, ರಕ್ಕಸರು ಶುಕ್ರಚಾರ್ಯರನ್ನು ಆರಿಸಿಕೊಂಡಂತೆ ಮಾನವನು ತನ್ನ ಉದ್ಧಾರಕ್ಕಾಗಿ ಶ್ರೀರಾಘವೇಂದ್ರತೀರ್ಥಗುರುಸಾರ್ವಭೌಮರನ್ನು ಸ್ವೀಕರಿಸದೇ ಅನ್ಯಮಾರ್ಗವಿಲ್ಲ. (ಏಕೆಂದರೆ ಇವರು ಭೇದಭಾವವಿಲ್ಲದೆ ಸರ್ವರನ್ನು ಕಾಪಾಡುತ್ತಿರುವುದರಿಂದಲೇ ರಾಯರ ಸನ್ನಿಧಾನ-ಗಳಲ್ಲಿ ಈ ಪರಿ ಜನಸಂದಣಿ) ಕೇಳಬಿದ್ದ ಮಾನವರಿಗೆ ಜಾತಿ-ಮತ-ಭೇದವಿಲ್ಲದೆ ತಮ್ಮ ಪುಣ್ಯವನ್ನು ಧಾರೆಯೆರೆಯುತ್ತಾ ಮುನ್ನೂರ ಮೂವತ್ತಾರು ವರ್ಷಗಳಿಂದ ಬೃಂದಾವನದಲ್ಲಿ ವಿರಾಜಮಾನರಾಗಿ, ಇನ್ನೂ ಮುನ್ನೂರ ಅರವತ್ನಾಲ್ಕು ವರ್ಷಗಳ ಕಾಲ ಸಶರೀರರಾಗಿ ವಿರಾಜಮಾನರಾಗಿರುವ ಗುರುಸಾರ್ವಭೌಮ-ರನ್ನು ಪ್ರಸನ್ನೀಕರಿಸಿಕೊಳ್ಳಲು ರಾವಣನಂತೆ ತಲೆ ಕಡಿದುಕೊಂಡು, ಕರುಳ ಕಿತ್ತು ವೀಣೆ ನುಡಿಸುವಷ್ಟು ಶ್ರಮ ಪಡಬೇಕಿಲ್ಲ (ಆ ರಕ್ಕಸರ ಸಾಮರ್ಥ್ಯ ನಮ್ಮಲ್ಲಿಲ್ಲ). **ಕೇವಲ ಒಂದೇ ಒಂದು ಘಳಿಗೆ ದೃಢಭಕ್ತಿ-ಯಿಂದ ಪರಿಪೂರ್ಣ ಶರಣಾಗತರಾಗಿ ಧ್ಯಾನಿಸಿದರೆ ಸಾಕು.** ಖಂಡಿತಾ ಉದ್ಧಾರವಾಗುತ್ತೇವೆ.

**"ನಿನ್ನಾ ನಂಬಿದ ಮಾನವ ಭವದೀ ಬನ್ನಾ ಪಡದೇ ತಾನಿರುವಾ"**

-ಶ್ರೀಗುರುಜಗನ್ನಾಥವಿಠಲ

ಲೇಖನಾಂಕ

# ಶ್ರೀಗುರುಸಾರ್ವಭೌಮರ ಭಕ್ತವಾತ್ಸಲ್ಯ!

ದಿ|| ರಾಜಾ. ಎಸ್. ಗುರುರಾಜಾಚಾರ್ಯರು
ಬೆಂಗಳೂರು

ಶ್ರೀಮತೋ ರಾಘವೇಂದ್ರಸ್ಯ ನಮಾಮಿ ಪದಪಂಕಜೇ ।
ಕಾಮಿತಾಶೇಷಕಲ್ಯಾಣಕಲನಾಕಲ್ಪಪಾದಪೌ ॥

ಶ್ರೀರಾಘವೇಂದ್ರಸ್ವಾಮಿಗಳು ಇಂದು ಕಾಮಧೇನು - ಕಲ್ಪವೃಕ್ಷ, ಭಕ್ತಿಚಿಂತಾಮಣಿಗಳೆಂದು ವಿಶ್ವಮಾನ್ಯರಾಗಿದ್ದಾರೆ. ಅತೀಂದ್ರಿಯ ವಸ್ತುಗಳಲ್ಲಿ ನಂಬಿಕೆಯಿಲ್ಲದ ಇಂದಿನ ವಿಜ್ಞಾನಯುಗದಲ್ಲಿಯೂ ಜನರು ಶ್ರೀಗುರುರಾಜರನ್ನು ನಂಬುತ್ತಾರೆ. ಉದ್ಧಾರಕ ಗುರುಗಳೆಂದು ಅವರನ್ನು ಪೂಜಿಸಿ ಇಷ್ಟಾರ್ಥಗಳನ್ನು ಪಡೆಯುತ್ತಿದ್ದಾರೆ. ಗುರುಗಳು ಬೃಂದಾವನ ಪ್ರವೇಶ ಮಾಡಿ ಮುನ್ನೂರಕ್ಕೂ ಹೆಚ್ಚು ವರ್ಷಗಳು ಸಂದಿದ್ದರೂ, ಅಂದಿನಿಂದ ಇಂದಿನವರೆಗೆ ಜಾತಿ-ಮತ-ಪಂಥ-ಭಾಷೆ-ದೇಶ-ವಯೋ-ಲಿಂಗ ಭೇದವಿಲ್ಲದೆ ಲಕ್ಷಾಧಿಕ ಜನರು ಅವರನ್ನು ಶರಣುಹೋಗಿ, ಸೇವಿಸಿ, ವಿಜ್ಞಾನ, ವೈದ್ಯಶಾಸ್ತ್ರಗಳಿಂದಲೂ ಪರಿಹರಿಸಲಾಗದ ವಿವಿಧ ಮಾನಸಿಕ, ದೈಹಿಕ ರೋಗಾದ್ಯುಪದ್ರವಗಳಿಂದ ಪಾರಾಗಿ ಅವರ ಅನುಗ್ರಹದಿಂದ ಸಂತಾನ, ಸಂಪತ್ತು, ವಿದ್ಯೆ, ಶಾಂತಿ, ಸಮಾಧಾನ, ಕೀರ್ತಿ, ಪ್ರತಿಷ್ಠೆ ಮುಂತಾದ ತಂತಮ್ಮ ವಾಂಛಿತಗಳನ್ನು ಪಡೆದು ಸುಖಿಸುತ್ತಿರುವುದು ಅನುಭವವೇದ್ಯವಿಚಾರವಾಗಿದೆ. ಇದು ಅವರ ಭಕ್ತವಾತ್ಸಲ್ಯ ದ್ಯೋತಕವಾಗಿದೆ. ಇಂತು ವಿಶ್ವದ ಭಕ್ತಸಂದೋಹವನ್ನು ಸಲಹಿ ಬೇಡಿದ ಮನೋವಾಂಛಿತ ಗಳನ್ನು ನೀಡಿ ಕಾಪಾಡುತ್ತಿರುವ ಶ್ರೀಗುರುರಾಜರಿಗೆ ಇಂಥಹಾ ಅಗಾಧ ಸಾಮರ್ಥ್ಯವೆಂತು ಲಭಿಸಿದವು? ಇದು ಇಂದು ವಿಜ್ಞಾನಿಗಳಿಂದ ಹಿಡಿದು ಆಪಂಡಿತ ಪಾಮರರವರೆಗೆ ಸರ್ವರನ್ನೂ ಅಚ್ಚರಿಗೊಳಿಸುತ್ತಿರುವ ವಿಚಾರವಾಗಿದೆ!

ಈ ಒಂದು ಪ್ರಶ್ನೆಗೆ ಶ್ರೀಅಪ್ಪಣಾಚಾರ್ಯರು 'ಶ್ರೀಗುರುಸ್ತೋತ್ರ'ದಲ್ಲಿ ಸಮಂಜಸ ಉತ್ತರವಿತ್ತಿದ್ದಾರೆ - ''ಶ್ರೀರಾಘವೇಂದ್ರೋ ಹರಿಪಾದಕಂಜನಿಷೇವಣಾಲ್ಲಬ್ಧಸಮಸ್ತಸಂಪತ್'' ಎಂದು. ಅಂದರೆ ಮಂದಾರುಜವೃಂದಾರಕವೃಂದವಂದನೀಯಪಾದಾರವಿಂದನಾದ ಇಂದಿರಾರಮಣ ಗೋವಿಂದ ಸುಂದರ ಚರಣಾರವಿಂದಮಕರಂದಸುಧಾಸ್ವಾದನಮತ್ತಮಧುಕರರಾದ ಶ್ರೀರಾಘವೇಂದ್ರಯತಿಚಂದ್ರಮರು ಆ





ನಂದನಂದನನನ್ನು ಅಸಾಧಾರಣ ಸಾತ್ವಿಕ ಭಕ್ತಿಯಿಂದಾರಾಧಿಸಿ ಅವನ ಪ್ರಸಾದ- ದಿಂದ ಜಗತ್ತಿನ ಜನತೆಯ ಆಧಿವ್ಯಾಧಿ ಮುಂತಾದ ಕಷ್ಟಪರಂಪರೆಯನ್ನು ಬಡಿದೋಡಿಸಿ ಸಕಲ ಇಷ್ಟಾರ್ಥ ಸಂದೋಹವನ್ನು ತಂದಿತ್ತು ಪೊರೆವ ಪರಮಸಂಪತ್ತನ್ನು ಪೊಂದಿದ್ದಾರೆ! ಅಂತೆಯೇ ಶ್ರೀರಾಯರು ಬೃಂದಾವನ ಪ್ರವೇಶ ಮಾಡಿ ಶತಮಾನಗಳುರುಳಿದ್ದರೂ 'ರಾಘವೇಂದ್ರ! ನೀನೇ ಗತಿ' ಎಂದು ಬೇಡಿದರೆ ಕರದಲ್ಲಿಗೆ ಬಂದು ಭಕ್ತರನ್ನು ಕಾಪಾಡಿ ಅಭೀಷ್ಟಗಳನ್ನು ನೀಡುತ್ತಿದ್ದಾರೆ ಆ ಮಹಾನುಭಾವರು. ಅಂದ ಮೇಲೆ ಆ ತಪೋಮೂರ್ತಿಗಳ ಪುಣ್ಯಭಂಡಾರ ಅದೆಷ್ಟು ಹಿರಿದಾಗಿರಬೇಕು? ಬೇಡಿದವರಿಗೆ ನೀಡಿದಂತೆಲ್ಲಾ ಅವರ ಭಂಡಾರ ಮತ್ತೆ ತುಂಬುತ್ತಲೇ ಇದೆ! ನಿಜ, ಅದು ಅಕ್ಷಯ ಭಂಡಾರ! ಯುಗಯುಗಗಳಿಂದ ತನ್ನ ಸೇವೆಯಿಂದ ಸುಪ್ರೀತನಾದ ಶ್ರೀಹರಿ ಪರಮಾತ್ಮನು ಮೆಚ್ಚಿ ಅನುಗ್ರಹಿಸಿದ ಅಕ್ಷಯಭಂಡಾರವಾಗಿ ರಾಜಿಸುತ್ತಿದೆ. ಶ್ರೀಹರಿಸೇವೆ-ತಪಸ್ಸುಗಳಿಂದ ಗಳಿಸಿದ ಆ ಪುಣ್ಯಭಂಡಾರದಿಂದ ಕೊಡುಗೆಗಳನ್ನು ಪಡೆದ ಮಾನವನೇ ನಿಜವಾಗಿ ಧನ್ಯ!

ಯುಗಯುಗಗಳಿಂದಲೂ ಅವರು ತಮ್ಮ ಹಿಂದಿನ ಎಲ್ಲ ಅವತಾರಗಳಲ್ಲಿಯೂ, ಭಗವಂತನನ್ನು ತಮ್ಮ ಅಸದೃಶ ಭಕ್ತಿಯಿಂದ ಸೇವಿಸಿ ಆ ಪರಮಾತ್ಮನನ್ನು ಒಲಿಸಿಕೊಂಡು, ಅವನ ಭಕ್ತರಲ್ಲಿ ಅಗ್ರಗಣ್ಯರಾಗಿ, ಮತ್ತೊಬ್ಬರು ಹರಿಯಿಂದ ಪಡೆಯಲಳವಲ್ಲದ ಶ್ರೇಷ್ಠ ವರಗಳನ್ನು ಗಳಿಸಿ, ಇಂದು ತನ್ಮೂಲಕ ಜಗತ್ತನ್ನು ಪೊರೆಯುತ್ತಾ ವಾಂಛಿತಗಳನ್ನು ಕರುಣಿಸುವ ಅದ್ಭುತ ಶಕ್ತಿಯನ್ನು ಪಡೆದಿದ್ದಾರೆ.

ಶ್ರೀಗುರುರಾಜರು ಮಾನವೋತ್ತಮ, ಮಾತ್ರವಲ್ಲ; ಉತ್ತಮ ದೇವತೆಗಳು. ನೃಸಿಂಹಪುರಾಣವಚನವು ಇದನ್ನು ಸಾರುವುದು. ಅನೇಕ ಅಪರೋಕ್ಷಜ್ಞಾನಿಗಳು ಅವರನ್ನು ದೇವತೆಗಳೆಂದೂ, ಶ್ರೀಪ್ರಹ್ಲಾದ - ಬಾಹ್ಲೀಕ - ವ್ಯಾಸರಾಜರ ಅವತಾರವೆತ್ತಿದ ಶಂಕುಕರ್ಣನೆಂಬ ಕರ್ಮಜದೇವತೆ ಎಂದೂ, ಶ್ರೀಹರಿಸಂಕಲ್ಪದಂತೆ ಲೋಕ ಕಲ್ಯಾಣಕ್ಕಾಗಿ ಅವತರಿಸಿದ ಭಾಗವತೋತ್ತಮರೆಂದು ಕೊಂಡಾಡಿದ್ದಾರೆ.

ಹಿಂದೆ ಶ್ರೀಪ್ರಹ್ಲಾದರಾಜರಾಗಿ ಅವತರಿಸಿದ್ದಾಗ ಇವರು ಪರಮಾತ್ಮನಲ್ಲಿ ಮಾಡಿದ ಭಕ್ತಿ, ಭಗವಂತ ಇವರಲ್ಲಿ ಮಾಡಿದ ವಿಶೇಷಾನುಗ್ರಹ, ನೀಡಿದ ವರಗಳ ವಿಚಾರ ಸುಜನರಿಗೆ ತಿಳಿದ ವಿಚಾರವೇ ಆಗಿದೆ - ''ಭವಂತಿ ಪುರುಷಾ ಲೋಕೇ ಮದ್ಭಕ್ತಾಸ್ತ್ವಾಮನುವ್ರತಾಃ'' ಎಂಬ ಪರಮಾತ್ಮನ ವರದಂತೆ - ''ವತ್ಸ ಪ್ರಹ್ಲಾದ! ಜಗತ್ತಿನಲ್ಲಿ ನನ್ನ ಭಕ್ತರಾದವರೆಲ್ಲ ನಿನ್ನನ್ನು ಆಶ್ರಯಿಸುವರು, ಭಕ್ತರಾಗುವರು.

ಏಕೆಂದರೆ ತಾತ್ವಿಕ - ನಾರದಾದಿಗಳನ್ನು ಬಿಟ್ಟು ನೀನು ಉಳಿದ ಸಮಸ್ತ ಜನರಿಗೆ ಬಿಂಬನಾಗಿರುವೆ. ಬಿಂಬನ ಅನುಗ್ರಹವಿಲ್ಲದೆ ಪ್ರತಿಬಿಂಬರ ಉದ್ಧಾರವಾಗದಷ್ಟೆ? ಎಂದು ಘೋಷಿಸಿದ್ದಾನೆ ಶ್ರೀಹರಿ. ಅಂತೆಯೇ ಜಗತ್ತಿನ ಜನತೆ ಇಂದು ಅವರನ್ನು ಆಶ್ರಯಿಸಿ ಉದ್ಧೃತವಾಗುತ್ತಿದೆ. ಇದೂ ಅವರ ಭಕ್ತವಾತ್ಸಲ್ಯಕ್ಕೆ ಉತ್ತಮ ಉದಾಹರಣೆಯಾಗಿದೆ. ಇದೂ ಅವರ ಭಕ್ತವಾತ್ಸಲ್ಯಕ್ಕೆ ಉತ್ತಮ ಉದಾಹರಣೆಯಾಗಿದೆ''.

ಇಷ್ಟೇ ಅಲ್ಲ, ಶ್ರೀಹರಿ ಅವರಿಗೆ ಇನ್ನೊಂದು ಅಸಾಧಾರಣ ವರವಿತ್ತಿದ್ದಾನೆ - ''ತ್ವಾಂ ಚ ಮಾಂ ಚ ಸ್ಮರನ್ ಕಾಲೇ ಕರ್ಮಬಂಧಾತ್ಪ್ರಮುಚ್ಯತೇ'' ಪ್ರಹ್ಲಾದ! ಮೊದಲು ನಿನ್ನನ್ನು ಅನಂತರ ನನ್ನನ್ನು ಸದಾ ಯಾರು ಸ್ಮರಿಸುವರೋ ಅವರು ಸಂಸಾರಬಂಧನ, ಕರ್ಮಬಂಧನಗಳಿಂದ ಮುಕ್ತರಾಗಿ ಶಾಶ್ವತ ಸುಖಭಾಗಿಗಳಾಗುವರು ಎಂದೂ ಅನುಗ್ರಹರೂಪ ವರವಿತ್ತಿದ್ದಾನೆ.

ಶ್ರೀಹರಿಯು ತಮ್ಮಲ್ಲಿ ಮಾಡಿದ ಅನುಗ್ರಹ, ಕಾರುಣ್ಯ, ವಾತ್ಸಲ್ಯಗಳು ಶ್ರೀರಾಯರ ಮನಸ್ಸಿನಲ್ಲಿ ಅಚ್ಚಳಿಯದೆ ಜಾಗೃತವಾಗಿರುವುದರಿಂದಲೇ ಅವರು ತಮ್ಮ ಉದ್ಧಾರಕ ಪ್ರಭುವಿನಂತೆ ತಮ್ಮನ್ನು ಭಜಿಸುವ ಭಕ್ತರಲ್ಲಿ ಇಂತು ಅಪಾರ ವಾತ್ಸಲ್ಯದಿಂದ ಅನುಗ್ರಹಮಾಡುತ್ತಿದ್ದಾರೆ. ಮನುಕುಲದ ಹಿತಚಿಂತಕರಾದ ಮಂತ್ರಾಲಯ ಮುನೀಂದ್ರರಿಗೆ, ದೀನದಲಿತರು, ವಿವಿಧ ಭಾಷಾಪನ್ನನರು, ದರಿದ್ರರು, ನೊಂದವರನ್ನು ಕಂಡೊಡನೆ ಅವರ ಹೃದಯವು ಕರಗಿ ನೀರಾಗುವುದು. ಅನುಕಂಪದ ಒರತೆ ಪುಟಿದೇಳುವುದು. ಅವರ ಮಾನಸ ಗಂಗೋತ್ರಿಯಿಂದ ಕಾರುಣ್ಯವಾಹಿನಿಯು ಹೊರ ಹೊಮ್ಮಿ ಹರಿದು ತಮ್ಮ ದಯಾಮೃತವರ್ಷಣದಿಂದ ಭಕ್ತಜನತೆಯನ್ನು ಉಜ್ಜೀವನಗೊಳಿಸಿ ಅಮಂದಾನಂದವನ್ನಿತ್ತು ಕಾಪಾಡುವುದು! ಅಂತೆಯೇ ಅವರ ಶಿಷ್ಯರಾದ ಶ್ರೀಯೋಗೀಂದ್ರತೀರ್ಥರು ಗುರುಪಾದರನ್ನು ನಮಿಸುವ ಚರಮಶ್ಲೋಕದಲ್ಲಿ ''ನಮೋಽತ್ಯಂತದಯಾಲವೇ'' - ''ಪರಮದಯಾಶಾಲಿಗಳಾದ ಶ್ರೀರಾಘವೇಂದ್ರರಿಗೆ ನಮಸ್ಕಾರ'' ಎಂದು ಮನಮುಟ್ಟುವಂತೆ ಸ್ತುತಿಸಿದ್ದಾರೆ.

ಶ್ರೀರಾಯರು ಶ್ರೀಪ್ರಹ್ಲಾದರಾಗಿದ್ದಾಗ ತಮ್ಮನ್ನು ಆಶ್ರಯಿಸಿದ್ದ ಅಸುರ ಬಾಲಕರ ಹಿತಕ್ಕಾಗಿ ಮಾಡಿದ ಉಪದೇಶ, ಮಾರ್ಗದರ್ಶನ, ಭಕ್ತರ ಅಭ್ಯುದಯ, ಶ್ರೇಯಸ್ಸಿಗಾಗಿ ಮಾಡಿದ ತ್ಯಾಗ, ಅನುಗ್ರಹಗಳು ಅವರ ಪ್ರೇಮಸ್ವಭಾವದ, ದಯೆಗಳಿಗೆ ಉದಾಹರಣೆಯಾಗಿವೆ. ಭಗವಂತನಲ್ಲಿ ನಿಷ್ಕಾಮಭಕ್ತಿಮಾಡಿ ಅವನ ಪ್ರಸಾದಕ್ಕೆ ಪಾತ್ರರಾಗಬೇಕು, ಅವನೊಬ್ಬನೇ ನಮ್ಮೆಲ್ಲರ ಉದ್ಧಾರಕ ಸ್ವಾಮಿ, ಅವನಿಗೆ





ಅನನ್ಯಭಾವದಿಂದ ಶರಣಾಗತರಾಗಿ ಶ್ರೀಹರಿಯನ್ನು ಭಜಿಸಿದಲ್ಲಿ ನಮ್ಮ ಉದ್ಧಾರ - ಶ್ರೇಯಃ ಪ್ರೇಯಗಳುಂಟಾಗುವುದೆಂದು ಮುಂತಾಗಿ ಉಪದೇಶಿಸಿ ಅಸುರ ಬಾಲಕರ ಕಲ್ಯಾಣಕ್ಕಾಗಿ ಶ್ರೀಪ್ರಹ್ಲಾದರು ಶ್ರಮಿಸಿರುವುದು ಭಾಗವತಾದಿಗಳಿಂದ ಸ್ಪಷ್ಟವಾಗುವುದು. ಪ್ರಹ್ಲಾದರು ತತ್ವಾಭಿಮಾನಿದೇವತಾವರ್ಗಕ್ಕೆ ಸೇರಿದವರು. ಅಂಥವರು ತಮ್ಮನ್ನು ಆಶ್ರಯಿಸಿದವರಲ್ಲಿ ವಿಶೇಷ ಕಾರುಣ್ಯವನ್ನು ತೋರಬೇಕೆಂದು ಶ್ರೀಹರಿಯ ಆಜ್ಞೆ ಉಂಟು. ಆದ್ದರಿಂದಲೇ ಪರಮಕರುಣಾಶಾಲಿಗಳಾದ ಪ್ರಹ್ಲಾದರು ತಮ್ಮ ಕೃಪಾವಿಶೇಷಕ್ಕೆ ಪಾತ್ರರಾದ ದೈತ್ಯಬಾಲಕರನ್ನು ಸಂಸಾರಬಂಧನದಿಂದ ಪಾರುಮಾಡಿ ರಕ್ಷಿಸುವಂತೆ ಭಗವಂತನನ್ನು ಪ್ರಾರ್ಥಿಸುತ್ತಾರೆ - ''ದೇವ! ದೇವತೆಗಳು ಸ್ವಾಶ್ರಿತರಲ್ಲಿ ದಯೆ ತೋರುವಂತೆ ನಿನ್ನಿಂದ ಪ್ರೇರಿತನಾಗಿ ನಾನೂ ಸಹ ನನ್ನನ್ನು ನಂಬಿ ಬಂದು ಆಶ್ರಯಿಸಿರುವ ಈ ದೈತ್ಯಬಾಲಕರಲ್ಲಿ ಅನುಕಂಪವುಳ್ಳವನಾಗಿದ್ದೇನೆ. ಸ್ವತಃ ಉದ್ಧಾರರಾಗಲು ಅಸಮರ್ಥರಾಗಿರುವ ಈ ಅಸುರ ಬಾಲಕರನ್ನು ಬಿಟ್ಟು ನಾನೊಬ್ಬನೇ ಮೋಕ್ಷವನ್ನು ಬಯಸುವುದಿಲ್ಲ. ಸ್ವಾಮಿ! 'ನನ್ನ ಪ್ರಸಾದದಿಂದ ನಿನಗೆ ಮೋಕ್ಷವಾಗಲಿ, ಉಳಿದ ದೈತ್ಯಬಾಲಕರು ಸ್ವಸ್ವಯೋಗ್ಯ ಇತರೆ ಮಾರ್ಗಗಳಿಂದ ಮುಕ್ತರಾಗಲಿ' ಎಂದು ನೀನು ಹೇಳಬಹುದು. ಆದರೆ ದೇವ! ಅವರಿಗೆ ನಿನ್ನ ಹೊರತು ಬೇರೆ ಯಾರೂ ದಿಕ್ಕಿಲ್ಲ, ಗತಿಯಿಲ್ಲ. ಆದುದರಿಂದ ಸ್ವಾಮಿ, ನೀನೇ ಅವರಿಗೆ ಮೋಕ್ಷ ಮಾರ್ಗವನ್ನು ತೋರಿಸಿ ಕಾಪಾಡಬೇಕು'' ಎಂದು ಶ್ರೀಹರಿಯನ್ನು ಪ್ರಾರ್ಥಿಸಿದ್ದಾರೆ. ಈ ವಿವರಣೆಯಿಂದ ಪ್ರಹ್ಲಾದಾವತಾರಿಗಳಾದ ಶ್ರೀರಾಯರಿಗೆ ಆಶ್ರಿತ ಜನರಲ್ಲಿರುವ ಕಾರುಣ್ಯವು ವ್ಯಕ್ತವಾಗುವುದು.

ಶ್ರೀವ್ಯಾಸರಾಜರಾಗಿ ಅವತರಿಸಿದಾಗ ಅವರು ಶರಣಾಗತರು ಮತ್ತು ದೀನ ದಲಿತ ಜನರಲ್ಲಿ ತೋರಿರುವ ವಾತ್ಸಲ್ಯವು ಇತಿಹಾಸ ಪ್ರಸಿದ್ಧವಾಗಿದೆ. ಶ್ರೀಬ್ರಹ್ಮದೇವರ ಶಾಪರೂಪವರದಿಂದ ಶ್ರೀಹರಿಸಂಕಲ್ಪದಂತೆ ಕರ್ಮಜದೇವತೆಯಾದ ಶಂಕುಕರ್ಣನು ಶ್ರೀವಾಯುದೇವರ ವಿಶೇಷಾವೇಶಯುಕ್ತನಾಗಿ, ಪ್ರಹ್ಲಾದನಾಗಿದ್ದಾಗ ಶ್ರೀನೃಸಿಂಹದೇವರು ಕರುಣಿಸಿದ ಶ್ರೇಷ್ಠ ವರಗಳಿಂದ ಮಂಡಿತನಾಗಿ ಬಾಹ್ಲೀಕ - ಶ್ರೀವ್ಯಾಸರಾಜರಾಗಿದ್ದಾಗ ಯಾದವಕುಲಶೇಖರನಾದ ಶ್ರೀಕೃಷ್ಣಸೇವೆಯಿಂದ ಲಬ್ಧವಾದ ಪರಮ ಪುಣ್ಯರಾಶಿಯಿಂದೊಡಗೂಡಿ ತನ್ನ ಕೊನೆಯ ಅವತಾರವನ್ನು ಕೈಗೊಂಡು ಶ್ರೀರಾಘವೇಂದ್ರ ಗುರುಸಾರ್ವಭೌಮರೆಂಬ ಹೆಸರಿನಿಂದ ಅವತರಿಸಿದನು. ಭಕ್ತಬಂಧು, ಕಾರುಣ್ಯಸಿಂಧು, ಕಲಿಯುಗ ಕಲ್ಪತರು, ಕಾಮಧೇನು, ಚಿಂತಾಮಣಿಗಳೆಲ್ಲ ತಾನೇ ಆಗಿ ಲೋಕ ವಿಖ್ಯಾತನಾದನು, ಸರ್ವಮಾನ್ಯನಾದನು.

ಲೋಕಕಲ್ಯಾಣ, ದ್ವೈತಸಿದ್ಧಾಂತಸ್ಥಾಪನೆ, ಅಸಾಧಾರಣ ಗ್ರಂಥರತ್ನಗಳ ರಚನೆ, ಭಾಗವತಧರ್ಮ ಪ್ರಸಾರ, ಆಶ್ರಿತರಾದ ದೀನದಲಿತಾದಿ ಸಮಸ್ತ ಸಜ್ಜನರ ಉದ್ಧಾರ, ಶ್ರೀಹರಿಸರ್ವೋತ್ತಮತ್ವ, ಶ್ರೀವಾಯುಜೀವೋತ್ತಮತ್ವಸ್ಥಾಪನೆ - ಪ್ರಸಾರಗಳಿಗಾಗಿಯೇ ಧರೆಗಿಳಿದು ಬಂದ ಶ್ರೀಗುರುರಾಜರು ಪರಮಹಂಸರಾಗುವ ಮೊದಲು, ಶ್ರೀಮಧ್ವಸಾಮ್ರಾಜ್ಯದಲ್ಲಿ ಪಟ್ಟಾಭಿಷಿಕ್ತರಾಗಿ ಕರ್ಮಂದೀಂದ್ರರಾದ ಮೇಲೆ ವಿದ್ಯಾಸಿಂಹಾಸನದಲ್ಲಿ ವಿರಾಜಿಸಿದ್ದ ಐವತ್ತು ವರ್ಷಗಳು ಮತ್ತು ಸಶರೀರರಾಗಿ ಬೃಂದಾವನ ಪ್ರವೇಶ ಮಾಡಿದ ತರುವಾಯ ಕಳೆದ ಮುನ್ನೂರಕ್ಕೂ ಹೆಚ್ಚು ವರ್ಷಗಳಿಂದ ತೋರಿಸುತ್ತಿರುವ ಮಹಿಮೆಗಳು, ಮಾಡುತ್ತಿರುವ ಭಕ್ತಜನರ ಉದ್ಧಾರ, ವಾತ್ಸಲ್ಯಾದಿಗಳು ಇಂದು ಪ್ರತಿಯೊಬ್ಬ ಸಜ್ಜನನಿಗೂ ತಿಳಿದಿರುವ ವಿಚಾರವಾಗಿದೆ.

ಶ್ರೀಮದಾಚಾರ್ಯರ ಮಹಾಸಂಸ್ಥಾನಾಧಿಪತಿಗಳಾದ ಮೇಲೆ ಶ್ರೀರಾಯರು ತೋರಿದ ಶಿಷ್ಯ-ಭಕ್ತವಾತ್ಸಲ್ಯಗಳನ್ನು ಅವರ ಅಮರಚರಿತೆಯ ಪುಟ-ಪುಟಗಳೂ ಎತ್ತಿತೋರುವುವು. ಅನಾಥ ವೆಂಕಣ್ಣನನ್ನು ದಿವಾನ ವೆಂಕಣ್ಣನನ್ನಾಗಿ ಮಾಡಿದರು. ಬೆಂಗಾಡಿನಲ್ಲಿ ನೀರು-ನೆರಳಿಲ್ಲದಡೆಯಲ್ಲಿ ಶಿಷ್ಯನ ಪತ್ನಿ ಪ್ರಸವಿಸಿ ಬಳಲುತ್ತಿರುವಾಗ ಕಮಂಡಲುವಿನಿಂದ ನೀರನ್ನೂ, ಕರವಸ್ತ್ರದಿಂದ ನೆರಳನ್ನೂ ನೀಡಿ ಕಾಪಾಡಿದರು. ತಾಮ್ರಪರ್ಣೀ ತೀರದಲ್ಲಿ ಸಮಾಜದಿಂದ ಬಹಿಷ್ಕೃತನಾಗಿದ್ದ ವಿಪ್ರನೋರ್ವನು ಉದ್ಧರಿಸು-ವಂತೆ ಶರಣಾಗತನಾದಾಗ ಅವನನ್ನು ಪ್ರಾಯಶ್ಚಿತ್ತಾದಿಗಳಿಂದ ಮತ್ತು ಶಂಖೋದಕ ಪ್ರೋಕ್ಷಣದಿಂದ ಪರಿಶುದ್ಧಗೊಳಿಸಿ ಪತಿತಪಾವನರಾದರು. ಯವನ ರಾಜಕುಮಾರನು ಸರ್ಪದಂಶನದಿಂದ ಮೃತನಾಗಿರಲು ತಮ್ಮ ತಪಃಪ್ರಭಾವದಿಂದ ಅವನನ್ನು ಉಜ್ಜೀವನ-ಗೊಳಿಸಿ ತಾವು ಸರ್ವಜನ ಹಿತೈಷಿಗಳೆಂಬುದನ್ನು ತೋರಿಸಿಕೊಟ್ಟರು. ಪ್ರಿಯಶಿಷ್ಯ ವೆಂಕಟ ದೇಶಾಯಿಯ ಪುತ್ರನು ಮಾವಿನ ಹಣ್ಣಿನ ರಸಾಯನದಲ್ಲಿ ಬಿದ್ದು ಮೃತ-ನಾಗಲು ಮಂತ್ರೋದಕ ಪ್ರೋಕ್ಷಣದಿಂದ ಬದುಕಿಸಿದರು. ಹೀಗೆ ಗುರುಗಳ ಕಾರುಣ್ಯ-ವಾಹಿನಿಯಲ್ಲಿ ಮಿಂದು ಅಮಂದಾನಂದತುಂದಿಲರಾದ ಭಕ್ತರು ಸಹಸ್ರಾರು ಜನರು. ಅವರ ದಯೆ-ವಾತ್ಸಲ್ಯಗಳಿಗೆ ಕಾಲ, ದೇಶ, ವಯೋ, ಲಿಂಗ, ಜಾತಿ, ಮತ, ಭಾಷೆಗಳ ಭೇದವಿಲ್ಲ! ''ನೀನೇ ಗತಿಯೆಂದು ಶರಣಾಗತರಾದರೆ ಅವರ್‍ಯಾರೇ ಆಗಿರಲಿ ಅವರವರ ಯೋಗ್ಯತೆಗನುಸಾರವಾಗಿ ಸಕಲರನ್ನೂ ಕಾಪಾಡುವ ಗುರುಗಳಾದ್ದ-ರಿಂದಲೇ ಶ್ರೀಮಂತ್ರಾಲಯ ಸ್ವಾಮಿಗಳನ್ನು ಇಂದು 'ವಿಶ್ವಗುರು'ಗಳೆಂದು ಜನತೆ ಕೊಂಡಾಡುತ್ತಿದೆ!''

ಶ್ರೀಗುರುರಾಜರು ಬೃಂದಾವನ ಪ್ರವೇಶ ಮಾಡಿದ ಮೇಲೆ ಕಳೆದ ಮೂರು ಶತಕಗಳಿಂದ ಅವರು ತೋರಿರುವ ಮಹಿಮೆ, ಮಾಡುತ್ತಿರುವ ಅನುಗ್ರಹಗಳು ಅನಂತ! ಅವುಗಳನ್ನು ವರ್ಣಿಸಲಸದಳ. ಅವರ ಕರುಣೆಗೆ ಪಾತ್ರರಾಗಿ ಸಕಲ ಕಷ್ಟಗಳಿಂದ





ಪಾರಾಗಿ ತಮ್ಮೆಲ್ಲ ವಾಂಛಿತಾರ್ಥಗಳನ್ನೂ ಪಡೆದು ಸುಖಿಸುತ್ತಿರುವ ಲಕ್ಷಾಂತರ ಭಕ್ತಜನರಿಗೆ ಇವೆಲ್ಲ ಅನುಭವಕ್ಕೆ ಬಂದ ವಿಷಯವಾಗಿವೆ. ಅವುಗಳನ್ನು ಸಂಪೂರ್ಣವಾಗಿ ತಿಳಿಸಲು ಸಾಧ್ಯವಾಗದು. ಅಂತೆಯೇ ಶ್ರೀಅಪ್ಪಣ್ಣಾಚಾರ್ಯರೂ ಸಹ ''ಅಗಮ್ಯಮಹಿಮಾ ಲೋಕೇ ರಾಘವೇಂದ್ರೋ ಮಹಾಯಶಾಃ'' ಎಂದು ಉದ್ಗರಿಸಿದ್ದಾರೆ. ಇಂತಹ ಮಹಾಕರುಣಾಳುಗಳೂ, ಲೋಕಕಲ್ಯಾಣಕಾರಕರೂ, ಸಜ್ಜನೋದ್ಧಾರಕರೂ ಆದ ಶ್ರೇಷ್ಠಗುರುಗಳನ್ನು ಪಡೆದ ನಾವೇ ಮಹಾಭಾಗ್ಯಶಾಲಿಗಳು! ಪುಣ್ಯವಂತರು!!

❑❑



ಚಾತುರ್ಮಾಸ್ಯ ಸಂಕಲ್ಪ ಕೈಗೊಳ್ಳುವ ಮುನ್ನ ಆಷಾಢ ಶುದ್ಧ ಪೂರ್ಣಿಮೆಯಂದು ಮೃತ್ತಿಕಾ ಸಂಗ್ರಹಣೆಯ ಮೆರವಣಿಗೆಗೆ ಹೊರಡಲು ಸಿದ್ಧವಾಗಿರುವ ಧ್ವಜಪತಾಕೆಗಳು



ಚಾತುರ್ಮಾಸ್ಯ ಸಂಕಲ್ಪ ಕೈಗೊಳ್ಳುವ ಮುನ್ನ ಆಷಾಢ ಶುದ್ಧ ಪೂರ್ಣಿಮೆಯಂದು ಮೃತ್ತಿಕಾ ಸಂಗ್ರಹಣೆಯ ಪೂಜೆಯಲ್ಲಿ ಉಭಯ ಶ್ರೀಪಾದಂಗಳವರು



ಚಾತುರ್ಮಾಸ್ಯ ಸಂಕಲ್ಪ ಕೈಗೊಳ್ಳುವ ಮುನ್ನ ಆಷಾಢ ಶುದ್ಧ ಪೂರ್ಣಿಮೆಯಂದು ಶ್ರೀಸುಶಮೀಂದ್ರತೀರ್ಥರು ಮೃತ್ತಿಕಾ ಸಂಗ್ರಹಿಸಿ ಬೆಳ್ಳಿಯ ಪಲ್ಲಕ್ಕಿಯಲ್ಲಿ ಮೆರವಣಿಗೆಯಲ್ಲಿ ತರುತ್ತಿರುವ ದೃಶ್ಯ. ಇದನ್ನು ರಾಯರ ಬೃಂದಾವನದ ಮೇಲ್ಭಾಗದಲ್ಲಿ ಹಾಕಿ ಅಷ್ಟದಿಗ್ಬಂಧನಮಾಡಿ ಪೂಜಿಸುವುದು ಸಂಪ್ರದಾಯ. ಇದೇ ಮೃತ್ತಿಕೆಯನ್ನು ಬೃಂದಾವನ ಪ್ರತಿಷ್ಠಾಪನೆಗೆ ಉಪಯೋಗಿಸಲಾಗುವುದು.

# 336 ನೇ ಆರಾಧನಾ ಮಹೋತ್ಸವದ ವಿಶೇಷ ಚಿತ್ರಗಳು



ಧಾನ್ಯಪೂಜಾ



ಗಜಪೂಜಾ



ಗೋಪೂಜಾ



ನೂತನ ಭೋಜನಶಾಲಾ



ಭೋಜನಶಾಲಾ ದಾನಿಗಳಾದ ರಂಗನಗೌಡ ದಂಪತಿಗಳು



ನೂತನ ಭೋಜನಶಾಲಾ ರಾತ್ರಿಯಲ್ಲಿ



ಭೋಜನಶಾಲಾ ಪ್ರಾರಂಭದಂದು ಕಳಸಪ್ರೋಕ್ಷಣೆ




ರಾಯರ ಜೀವನಚರಿತ್ರೆಯ ಪುಸ್ತಕ ಬಿಡುಗಡೆ







‘ಕನ್ನಡಪ್ರಭ’ ಪತ್ರಿಕೆ ವಿಶೇಷ ಆವೃತ್ತಿ ಬಿಡುಗಡೆ



‘ತರಂಗ’ ವಿಶೇಷ ಸಂಚಿಕೆ ಬಿಡುಗಡೆ



ಪೂರ್ವಾರಾಧನಾ ಅಲಂಕಾರದಲ್ಲಿ ಪ್ರಹ್ಲಾದರಾಜರು



ಮಧ್ಯಾರಾಧನಾ ಅಲಂಕಾರದಲ್ಲಿ ಪ್ರಹ್ಲಾದರಾಜರು



ಚಾಮರಸೇವೆಯಲ್ಲಿ ಉಭಯ ಶ್ರೀಪಾದರು



ಉತ್ಸವಮಂಗಳಾರತಿಯಲ್ಲಿ ಉಭಯ ಶ್ರೀಪಾದರು



ತಮಿಳುನಾಡಿನ ವಿಶೇಷ ಅಲಂಕಾರದಲ್ಲಿ ರಾಯರ ಗರ್ಭಗುಡಿಯ ಮುಂಭಾಗ

## ಡಾ. ರಾಜ್‌ಗೆ ಮರಣೋತ್ತರವಾಗಿ ನೀಡಲಾದ ಶ್ರೀರಾಘವೇಂದ್ರಾನುಗ್ರಹ ಪ್ರಶಸ್ತಿ ಪ್ರದಾನ ಸಮಾರಂಭದ ವಿಶೇಷ ಚಿತ್ರಗಳು



ಶಿವರಾಜ್‌ಗೆ ಬಂಗಾರದ ಸರ ತೊಡಿಸುತ್ತಿರುವುದು



ಬೆಳ್ಳಿಯ ರಾಯರ ಫಲಕವನ್ನು ರಾಜ್ ಪುತ್ರರು ಭಕ್ತಜನತೆಗೆ ಪ್ರದರ್ಶಿಸುತ್ತಿರುವುದು



ಶ್ರೀಪಾದಂಗಳವರಿಂದ ಪ್ರಶಸ್ತಿ ವಿತರಣೆ



ಪಾರ್ವತಮ್ಮ ರಾಜಕುಮಾರ್ ಪ್ರಶಸ್ತಿ ಸ್ವೀಕರಿಸಿ ಮಾತನಾಡುತ್ತಿರುವುದು



ಶ್ರೀಪಾದಂಗಳವರಿಂದ ಪ್ರಶಸ್ತಿ ವಿತರಣೆ



ವೇದಿಕೆಯಲ್ಲಿ ರಾಜ್ ಪುತ್ರರು



ರಾಯರ ಗರ್ಭಗುಡಿಯ ಹಿಂಭಾಗದಲ್ಲಿ ರಾಜ್ ಪುತ್ರರು



ಪುನೀತ್‌ಗೆ ಶ್ರೀಪಾದಂಗಳವರ ಆಶೀರ್ವಾದ







ಶ್ರೀರಾಘವೇಂದ್ರಾನುಗ್ರಹ ಪ್ರಶಸ್ತಿ (ಧಾರ್ಮಿಕ) ಸ್ವೀಕರಿಸುತ್ತಿರುವ ಡಾ. ಎ.ಆರ್. ಪಂಚಮುಖಿ



ಆಸ್ಥಾನ ವಿದ್ವಾನ್ ಪ್ರಶಸ್ತಿ ಸ್ವೀಕರಿಸುತ್ತಿರುವ ಡಾ. ಟಿ.ವಿ. ಗೋಪಾಲಕೃಷ್ಣನ್



ನೂತನವಾಗಿ ನಿರ್ಮಿಸಿದ ಬಂಗಾರದ ಪಲ್ಲಕ್ಕಿಯನ್ನು ಹೊತ್ತು ತರುತ್ತಿರುವ ದಾನಿಗಳು



ರಾಯರ ಸನ್ನಿಧಾನದಲ್ಲಿ ಬಂಗಾರದ ಪಲ್ಲಕ್ಕಿಯೊಂದಿಗೆ ಅದನ್ನು ನಿರ್ಮಿಸಿದ ಕುಶಲಕರ್ಮಿ ಶಂಕರ್



ನೂತನವಾಗಿ ನಿರ್ಮಿಸಿದ ಬಂಗಾರದ ಪಲ್ಲಕ್ಕಿ



ನೂತನವಾಗಿ ನಿರ್ಮಿಸಿದ ಬೆಳ್ಳಿಯ ಅಂಬಾರಿಯನ್ನು ಆನೆಯ ಮೇಲೆ ಏರಿಸುತ್ತಿರುವ ದೃಶ್ಯ



ನೂತನವಾಗಿ ನಿರ್ಮಿಸಿದ ಬೆಳ್ಳಿಯ ಅಂಬಾರಿ



ಬೆಳ್ಳಿಯ ಅಂಬಾರಿಯನ್ನು ನಿರ್ಮಿಸಿಕೊಟ್ಟ ದಾನಿಗಳಾದ ಶ್ರೀತಿಕ್ಕಾರೆಡ್ಡಿಯವರೊಂದಿಗೆ ರಾಜಾ. ಎಸ್. ರಾಜಗೋಪಾಲಾಚಾರ್ಯ ಮತ್ತು ಸುಯಮೀಂದ್ರಾಚಾರ್ಯರು



ದಾಸರ ವೇಷಗಳಲ್ಲಿ ಶ್ರೀಗುರುಸಾರ್ವಭೌಮ ವಿದ್ಯಾಪೀಠದ ವಿದ್ಯಾರ್ಥಿಗಳು



ಆರಾಧನಾ ಮಹೋತ್ಸವದಲ್ಲಿ ಪ್ರತ್ಯಕ್ಷ ಗಜವಾಹನೋತ್ಸವ







ಸುಮಾರು ಹದಿನೇಳು ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಭಕ್ತರು ನಿರ್ಮಿಸಿಕೊಟ್ಟ ಮಹಾರಥವು ಲಾರಿಯಲ್ಲಿ ಮಂತ್ರಾಲಯಕ್ಕೆ ಆಗಮಿಸಿದಾಗಿನ ದೃಶ್ಯ



ರಥದ ಜೋಡಣೆಯಲ್ಲಿ ☜

ಉತ್ಸವಕ್ಕೆ ಸಿದ್ಧಗೊಂಡ ರಥ ☞





ರಥೋತ್ಸವಕ್ಕೆ ಚಾಲನೆ ನೀಡುತ್ತಿರುವ ಶ್ರೀಸುಶಮೀಂದ್ರತೀರ್ಥರು



ರಥವಾನೇರಿದಾ ರಾಘವೇಂದ್ರ........ ರಾಜಬೀದಿಗಳಲ್ಲಿ ಸಾಗಿದ ರಥ



ರಥೋತ್ಸವಕ್ಕೆ ಸೇರಿದ ಭಕ್ತಸಾಗರ



ರಥೋತ್ಸವ ಸಂದರ್ಭದಲ್ಲಿ
ನರ್ತಿಸುತ್ತಿರುವ ಲಂಬಾಣಿ ಜನರು



ರಥದ ಬರುವಿಕೆಗಾಗಿ
ಕಾದುಕುಳಿತ ಭಕ್ತಜನರು



ಮಂತ್ರಾಲಯಕ್ಕೆ ಆಗಮಿಸಿದ
ಎಂಡೋಮೆಂಟ್ ಕಮಿಷನರ್
ಶ್ರೀಸುಂದರಕುಮಾರ್ ಅವರನ್ನು
ಬರಮಾಡಿಕೊಳ್ಳುತ್ತಿರುವುದು







ಶ್ರೀಗಳವರಿಂದ ಆಶೀರ್ವಾದ ಪಡೆಯುತ್ತಿರುವ ಆಂಧ್ರಪ್ರದೇಶದ
ಎಂಡೋಮೆಂಟ್ ಕಮಿಷನರ್ ಶ್ರೀಸುಂದರಕುಮಾರ್



ಸರ್ವಸಮರ್ಪಣೋತ್ಸವದ ವಿಶೇಷ
ಅಲಂಕಾರದಲ್ಲಿ ಪ್ರಹ್ಲಾದರಾಜರು



ಸರ್ವಸಮರ್ಪಣೋತ್ಸವದ ಸಂದರ್ಭದಲ್ಲಿ ಅಲಂಕೃತಗೊಂಡ
ರಥದೊಂದಿಗೆ ಉಭಯ ಶ್ರೀಪಾದರು





ಸಪ್ತರಾತ್ರೋತ್ಸವ ಸಂಗೀತೋತ್ಸವದಲ್ಲಿ ನಡೆದ ಮಲ್ಲಕಂಬದ ದೃಶ್ಯಗಳು


ಸಪ್ತರಾತ್ರೋತ್ಸವ ಸಂಗೀತೋತ್ಸವದಲ್ಲಿ ನಡೆದ ಸಾಂಸ್ಕೃತಿಕ ಕಾರ್ಯಕ್ರಮದ ದೃಶ್ಯ


ಸಾಂಸ್ಕೃತಿಕ ಕಾರ್ಯಕ್ರಮವನ್ನು ವೀಕ್ಷಿಸುತ್ತಿರುವ ಭಕ್ತಸಮೂಹ



ಮಂತ್ರಾಲಯದಲ್ಲಿ ಹೆಲಿಕ್ಯಾಪ್ಟರ್


ಹೆಲಿಕ್ಯಾಪ್ಟರ್‌ನಲ್ಲಿ ಶ್ರೀಗಳವರೊಂದಿಗೆ ಆಪ್ತಕಾರ್ಯದರ್ಶಿಗಳಾದ ರಾಜಾ. ಎಸ್. ರಾಜಗೋಪಾಲಾಚಾರ್ಯರು



ಹೆಲಿಕ್ಯಾಪ್ಟರ್‌ನಲ್ಲಿ ಪಯಣಿಸುತ್ತಿರುವ ಶ್ರೀಗಳು


ಪಂಜಿನ ಸೇವೆಯ ದೃಶ್ಯ


ಲ್ಯಾಪ್‌ಟಾಪ್‌ನಲ್ಲಿ ಮಂತ್ರಾಲಯವನ್ನು ವೀಕ್ಷಿಸುತ್ತಿರುವ ಶ್ರೀಸುಶಮೀಂದ್ರತೀರ್ಥರು






ಶ್ರೀಮಠದ ಕಾಗದಪತ್ರಗಳ ಪರಿಶೀಲನೆಯಲ್ಲಿ ಶ್ರೀಸುಶಮೀಂದ್ರತೀರ್ಥರು



ಕರ್ನಾಟಕ ರಾಜ್ಯದ
ಮಂತ್ರಿಗಳಾದ
ಶ್ರೀ ಈಶ್ವರಪ್ಪರವರು
ಮಂತ್ರಾಲಯದಲ್ಲಿ ತಮ್ಮ
ಮೊಮ್ಮಗನಿಗೆ
ತುಲಾಭಾರವನ್ನು
ನೆರವೇರಿಸುತ್ತಿರುವುದು



ರಾಯರ ದರ್ಶನಕ್ಕೆ
ಆಗಮಿಸುತ್ತಿರುವ
ಕರ್ನಾಟಕ ರಾಜ್ಯದ
ಮಂತ್ರಿಗಳಾದ
ಶ್ರೀ ಈಶ್ವರಪ್ಪ ಹಾಗೂ
ಕುಟುಂಬವರ್ಗ



ಶ್ರೀರಾಘವೇಂದ್ರಾನುಗ್ರಹ
ಪ್ರಶಸ್ತಿ (ಧಾರ್ಮಿಕ) ಗೆ
ನೀಡಲಾಗುವ
ಒಂದು ಲಕ್ಷ ರೂಪಾಯಿಗಳ
ನಗದನ್ನು ಸ್ವೀಕರಿಸುತ್ತಿರುವ
ಡಾ. ಎ.ಆರ್. ಪಂಚಮುಖಿ







ಮಂತ್ರಾಲಯದಲ್ಲಿ ಸುಮಾರು
ನಾಲ್ಕು ಕೋಟಿ ಮೂವತ್ತು ಲಕ್ಷ
ರೂಪಾಯಿಗಳ ವೆಚ್ಚದಲ್ಲಿ
ನೂತನವಾಗಿ ನಿರ್ಮಿಸಿದ
'ರಂಗಭವನ' ಭೋಜನಶಾಲೆಗೆ
ಶ್ರೀಗಳವರನ್ನು
ಕರೆದೊಯ್ಯುತ್ತಿರುವ
ದಾನಿಗಳಾದ ರಂಗನಗೌಡರು
(ಎಡಭಾಗದಿಂದ ಮೊದಲನೆಯವರು)



ಕೊಪ್ಪಳದ
ಮಾಜಿ ಸಂಸದ
ಶ್ರೀ ಹೆಚ್.ಜಿ. ರಾಮುಲು
ಅವರೊಂದಿಗೆ
ಸಂಭಾಷಣೆಯಲ್ಲಿ
ಶ್ರೀಸುಯತೀಂದ್ರತೀರ್ಥ
ಶ್ರೀಪಾದಂಗಳವರು



ರಂಗಭವನ
ಭೋಜನಶಾಲೆಯಲ್ಲಿ
ಭಕ್ತರ ಭೋಜನಕ್ಕಾಗಿ
ಸಿದ್ಧತೆ



“ಎಲ್ಲಾ ರಾಯರದು ನಂದೇನಿಲ್ಲ” - ಶ್ರೀಸುಶಮೀಂದ್ರತೀರ್ಥರು ಆಶೀರ್ವಚನ ನೀಡುತ್ತಿರುವುದು



ಶ್ರೀಸುಯತೀಂದ್ರತೀರ್ಥರು ಆಶೀರ್ವಚನ ನೀಡುತ್ತಿರುವುದು



ಅಧ್ಯಕ್ಷ ಭಾಷಣ ಮಾಡುತ್ತಿರುವ ಭಾರತದ ನಿವೃತ್ತ ಮುಖ್ಯನ್ಯಾಯಾಧೀಶರಾದ
ಶ್ರೀ ಎಂ.ಎನ್. ವೆಂಕಟಾಚಲಯ್ಯ








ತಿರುಮಲದಿಂದ ಮಂತ್ರಾಲಯಕ್ಕೆ ಆಗಮಿಸಿದ
ಶ್ರೀಶ್ರೀನಿವಾಸದೇವರ ಉತ್ಸವಮೂರ್ತಿಯ ಸೇವೆಯಲ್ಲಿ ಉಭಯ ಶ್ರೀಪಾದರು



ತಿರುಮಲದಿಂದ ಮಂತ್ರಾಲಯಕ್ಕೆ ಆಗಮಿಸಿದ
ಶ್ರೀಶ್ರೀನಿವಾಸದೇವರ ವಸ್ತ್ರವನ್ನು ಉಭಯ ಶ್ರೀಪಾದಂಗಳವರಿಗೆ ಸಮರ್ಪಿಸಿದ ದೃಶ್ಯ



ಪ್ರತಿವರ್ಷದಂತೆ ಆರಾಧನಾ ಸಂದರ್ಭದಲ್ಲಿ ತಿರುಮಲದಿಂದ ಶ್ರೀಶ್ರೀನಿವಾಸದೇವರಿಗೆ ಉಡಿಸಿದ ಭವ್ಯವಾದ ವಸ್ತ್ರವನ್ನು ಮೆರವಣಿಗೆಯಲ್ಲಿ ತಿರುಮಲದ ಮುಖ್ಯಸ್ಥರಾದ ಶ್ರೀಶೇಷಾದ್ರಿಯವರು ಹೊತ್ತು ತರುತ್ತಿರುವುದು. ಈ ವಸ್ತ್ರವನ್ನು ರಾಯರ ಮಧ್ಯಾರಾಧನ ದಿನದಂದು ರಾಯರ ಬೃಂದಾವನದ ಮೇಲೆ ಹೊದಿಸುವುದು ಒಂದು ಸಂಪ್ರದಾಯವಾಗಿದೆ.